ದಿನಾಂಕ 23-06-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ವಾದಿಯ ಪರ ಶ್ರೀ ಎಸ್.ಎಲ್.ಬಿ ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿರುವ ಸಂಗತಿಗಳನ್ನು ನಾನೇ ವಕೀಲರಿಗೆ ಹೇಳಿ ಬರೆಸಿರುತ್ತೇನೆ. ಅದರಲ್ಲಿರುವ ಸಂಗತಿಗಳು ಸತ್ಯದಿಂದ ಕೂಡಿದ್ದು, ಪ್ರಮಾಣ ಪತ್ರದಲ್ಲಿರುವ ಸಹಿಗಳು ನನ್ನದೇ ಆಗಿರುತ್ತವೆ.

ಆಸ್ತಿ ಸಂಃ 471 ರ ಕರ ನಿರ್ಧರಣಾ ಪಟ್ಟಿಯ ನ್ಯಾಯಾಲಯದ ದೃಢೀಕೃತ ಪ್ರತಿಯನ್ನು ಹಾಜರು ಮಾಡಿದ್ದು ಅದನ್ನು ನಿ.ಪಿ-1 ಎಂದು, ಆಸ್ತಿ ಸಂಃ 431 ರ ಕರ ನಿರ್ಧರಣಾ ಪಟ್ಟಿಯ ನ್ಯಾಯಾಲಯದ ದೃಢೀಕೃತ ಪ್ರತಿಯನ್ನು ಹಾಜರು ಮಾಡಿದ್ದು ಅದನ್ನು ನಿ.ಪಿ-2 ಎಂದು, ಆಸ್ತಿ ಸಂಃ 431/1 ರ ಕರ ನಿರ್ಧರಣಾ ಪಟ್ಟಿಯ ನ್ಯಾಯಾಲಯದ ದೃಢೀಕೃತ ಪ್ರತಿಯನ್ನು ಹಾಜರು ಮಾಡಿದ್ದು ಅದನ್ನು ನಿ.ಪಿ-3 ಎಂದು, ಆಸ್ತಿ ಸಂಃ 468 ರ ಕರ ನಿರ್ಧರಣಾ ಪಟ್ಟಿಯ ನ್ಯಾಯಾಲಯದ ದೃಢೀಕೃತ ಪ್ರತಿಯನ್ನು ಹಾಜರು ಮಾಡಿದ್ದು ಅದನ್ನು ನಿ.ಪಿ-4 ಎಂದು, ಆಸ್ತಿ ಸಂಃ 469 ರ ಕರ ನಿರ್ಧರಣಾ ಪಟ್ಟಿಯ ನ್ಯಾಯಾಲಯದ ದೃಢೀಕೃತ ಪ್ರತಿಯನ್ನು ಹಾಜರು ಮಾಡಿದ್ದು ಅದನ್ನು ನಿ.ಪಿ-5 ಎಂದು, ಆಸ್ತಿ ಸಂಃ 470 ರ ಕರ ನಿರ್ಧರಣಾ ಪಟ್ಟಿಯ ನ್ಯಾಯಾಲಯದ ದೃಢೀಕೃತ ಪ್ರತಿಯನ್ನು ಹಾಜರು ಮಾಡಿದ್ದು ಅದನ್ನು ನಿ.ಪಿ-6 ಎಂದು ಮತ್ತು ಮರಣ ಪ್ರಮಾಣ ಪತ್ರದ ನ್ಯಾಯಾಲಯದ ದೃಢೀಕೃತ ಪ್ರತಿಯನ್ನು ಹಾಜರು ಮಾಡಿದ್ದು ಅದನ್ನು ನಿ.ಪಿ-7 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಬಿ.ಎಸ್.ಎ ವಕೀಲರಿಂದಃ**

ಪಾಟೀ ಸವಾಲಿಗೆ ಸಮಯ ಕೋರಿರುತ್ತಾರೆ. ನ್ಯಾಯ ಮತ್ತು ಸಮ್ಮತತೆ ಆಧಾರದ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

ಓ. ಹೇ. ಕೆ ಸರಿ ಇದೆ ಎಂದು
ಒಪ್ಪಿರುತ್ತಾರೆ.
Sd/-

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್

ಸಾಕ್ಷಿದಾರರ ಸಹಿ